
ಎಸ್. ಸೂರ್ಯಪ್ರಕಾಶ ಪಂಡಿತ್

# ಹಿತಾಹಿತಗಳ ತಕ್ಕಡಿಯಲ್ಲಿ ಜೀವನದ ಜೋಕಾಲಿ



ಅಲ್ಲೊಂದು ಊರು. ಊರ ಹೊರಗೆ ಒಂದು ಕೊಳ. ಆ ಕೊಳದಲ್ಲಿ ಎರಡು ಹಂಸಗಳು ಮತ್ತು ಒಂದು ಆಮೆ ವಾಸವಾಗಿದ್ದವು.

ಆ ವರ್ಷ ಆ ಪ್ರದೇಶದಲ್ಲಿ ಬರಗಾಲ ಎದುರಾಯಿತು. ಮಳೆ ಇಲ್ಲದ ಕಾರಣ ಆ ಕೊಳದ ನೀರು ಒಣಗಿ ಬರಿದಾಗತೊಡಗಿತು. ಇನ್ನು ಹೆಚ್ಚು ದಿನ ಆ ಕೊಳದ ಆಶ್ರಯದಲ್ಲಿ ಬದುಕುಲು ಆಗದೆಂದು ಹಂಸಗಳಿಗೆ ಗೊತ್ತಾಯಿತು. ಬೇರೆ ಆಶ್ರಯವನ್ನು ಹುಡುಕಿಕೊಂಡು ಹೋಗಲು ತೀರ್ಮಾನಿಸಿದವು. ಈ ವಿಷಯ ಆ ಆಮೆಯ ಗಮನಕ್ಕೂ ಬಂದಿತು.